ಚಹರೆಯನ್ನು ಮೈಗೂಡಿಸಿಕೊಂಡವರಾಗಿ ಗಟ್ಟಿಯವರು ಕಾಣಿಸುತ್ತಾರೆ. ಅವರ ಮಾತುಗಳಲ್ಲಿ ಈ ಹೊಳಹನ್ನು ಕಾಣಬಹುದು.

ಬದಿಯಡ್ಕದಲ್ಲಿ ನಡೆದ ಕಾಸರಗೋಡು ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಅವರ ವಿಚಾರಗಳು ಸ್ಫುಟವಾಗಿವೆ. (ಸಮ್ಮೇಳನದ ಸ್ಮರಣಸಂಚಿಕೆ 'ತೆನೆ') ಅದರಲ್ಲಿ ಮಾತೃಭಾಷೆಯ ಕುರಿತಾದ ಚರ್ಚೆಯನ್ನು ಎತ್ತಿಕೊಂಡು, "ಕಾಸರಗೋಡು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ವಿಶಿಷ್ಟ ಸನ್ನಿವೇಶವನ್ನು ಗುರುತಿಸಿ ಕೌಟುಂಬಿಕ ಮಾತೃಭಾಷೆ ಮತ್ತು ಸಾಮಾಜಿಕ ಅಥವಾ ಪ್ರಾದೇಶಿಕ ಮಾತೃಭಾಷೆ ಎಂಬ ಭೇದಗಳನ್ನು ಹೇಳಿ, ಇಲ್ಲಿ ಬಹುಸಂಖ್ಯಾತರ ಕೌಟುಂಬಿಕ ಮಾತೃಭಾಷೆ ಕನ್ನಡವಲ್ಲದಿರಬಹುದು. ಆದರೆ ಅವರ ಸಾಮಾಜಿಕ ಅಥವಾ ಪ್ರಾದೇಶಿಕ ಮಾತೃಭಾಷೆ ಕನ್ನಡವಾಗಿದೆ. ಭಿನ್ನ ಕೌಟುಂಬಿಕ ಮಾತೃಭಾಷಿಗರು ಕನ್ನಡವನ್ನು ಸಾಮಾನ್ಯ ಪ್ರಾದೇಶಿಕ ಭಾಷೆಯಾಗಿ ಸ್ವೀಕರಿಸಿ ತಲೆಮಾರಿನಿಂದ ಬದುಕಿ ಬಂದಿರುವುದು ಐತಿಹಾಸಿಕ ಸತ್ಯ. ಆದ್ದರಿಂದ ಕಾಸರಗೋಡಿನ ಸಂದರ್ಭದಲ್ಲಿ ಸಾಂಸ್ಕೃತಿಕವಾಗಿ ಸಾಮಾಜಿಕವಾಗಿ ಪ್ರಾದೇಶಿಕ ಮಾತೃಭಾಷೆಯಾದ ಕನ್ನಡವನ್ನು ಗಮನಕ್ಕೆ ತೆಗೆದುಕೊಳ್ಳದಿದ್ದುದು

**ಜನಪ್ರಿಯತೆ, ಜನಪರತೆ ಹಾಗೂ ಪ್ರಯೋಗಶೀಲತೆ** – ಮೂರನ್ನೂ ಬರವಣಿಗೆಯಲ್ಲಿ ಅಳವಡಿಸಿಕೊಂಡು ಓದುಗರನ್ನು ತಲುಪಿದ ಕನ್ನಡದ ವಿಶಿಷ್ಟ ಲೇಖಕ ಕೆ.ಟಿ. ಗಟ್ಟಿ. ಕಾಸರಗೋಡು ಸಮೀಪದ ಕೂಡ್ಲೂ ಅವರ ಹುಟ್ಟೂರು. ತಂದೆ ಧೂಮಪ್ಪಗಟ್ಟಿಯವರು ಕೃಷಿಯನ್ನು ನೆಚ್ಚಿದವರು. ಯಕ್ಷಗಾನದ ಒಲವು ಹೊಂದಿದ್ದವರು. ತಾಯಿ ಪರಮೇಶ್ವರಿ ಪಾಡ್ದನಗಳನ್ನು ಹಾಡುವುದರಲ್ಲಿ ನಿಸ್ಸೀಮರು. ಕಲೆಯ ಪ್ರೀತಿ ಅಪ್ಪ–ಅಮ್ಮನ ಮೂಲಕ ಗಟ್ಟಿಯವರಿಗೆ ಬಂದ ಬಳುವಳಿ.

ಕೇರಳ ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಸ್ನಾತಕೋತ್ತರ ಪದವಿ ಪಡೆದ ಗಟ್ಟಿಯವರು ಮಣಿಪಾಲದ ಎಂ.ಐ.ಟಿ. ಸಂಸ್ಥೆಯಲ್ಲಿ ಆರು ವರ್ಷಗಳ ಕಾಲ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿದರು. ನಂತರ ಉಡುಪಿಯ ಟಿ.ಎಂ.ಎ.ಪೈ ಶಿಕ್ಷಣ ಮಹಾವಿದ್ಯಾಲಯದಲ್ಲೂ ಅಧ್ಯಾಪಕರಾಗಿ ವರ್ಷ ಕಾಲ ಸೇವೆಸಲ್ಲಿಸಿದರು. ಭಾರತ ಸರ್ಕಾರದಿಂದ ಪ್ರಾಧ್ಯಾಪಕರಾಗಿ ನಿಯುಕ್ತರಾಗಿ ಇಥಿಯೋಪಿಯಾದಲ್ಲಿ ಕಾರ್ಯ ನಿರ್ವಹಿಸಿದರು. ಇಥಿಯೋಪಿಯಾದಲ್ಲಿ ಇದ್ದಾಗಲೇ, ಲಂಡನ್ನಿನ ಟ್ರಿನಿಟಿ ಕಾಲೇಜಿನಿಂದ ಇಂಗ್ಲಿಷ್ ಕಲಿಕೆಯಲ್ಲಿ ಡಿಪ್ಲೊಮ ಮತ್ತು ಆಕ್ಸ್‌ಫರ್ಡಿನ ಕಾಲೇಜ್ ಆಫ್ ಪ್ರಿಸೆಪ್ಟರ್ಸ್‌ನಿಂದ ಡಿಪ್ಲೊಮ ಪಡೆದರು.

'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾದ 'ಶಬ್ದಗಳು' ಗಟ್ಟಿಯವರಿಗೆ ಕಾದಂಬರಿಕಾರರಾಗಿ ಗಟ್ಟಿ ನೆಲೆ ಒದಗಿಸಿತು. ನಲವತ್ತೆಂಟು ಕಾದಂಬರಿಗಳು ಸೇರಿದಂತೆ, ನಾಟಕ, ಕಥೆ, ವಿಚಾರ ಸೇರಿದಂತೆ ವಿವಿಧ ಪ್ರಕಾರಗಳಲ್ಲಿ ಗಟ್ಟಿಯವರು ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ. 'ಸಾಫಲ್ಯ', 'ಕಾರ್ಮುಗಿಲು', 'ಕಾಮರೂಪಿ', 'ಸನ್ನಿವೇಶ', 'ಅಬ್ರಾಹ್ಮಣ', 'ಅಶ್ರುತ ಗಾನ', 'ಅರಗಿನ ಅರಮನೆ', 'ಗ್ಲಾನಿ', 'ಪರಮಾರ್ಥ', 'ಕರ್ಮಣ್ಯೇವಾಧಿಕಾರಸ್ತೆ', 'ಕೂಪ', 'ಏಳು ಮಲ್ಲಿಗೆ ತೂಕದ ಹುಡುಗಿ', 'ಇತಿಹಾಸದ ಮೊಗಸಾಲೆಯಲ್ಲಿ', 'ಅನಂತರ', 'ಯುದ್ಧ' – ಗಟ್ಟಿಯವರ ಕೆಲವು ಜನಪ್ರಿಯ ಕಾದಂಬರಿಗಳು.

'ಮನುಷ್ಯನ ವಾಸನೆ ಮತ್ತು ಇತರ ಕಥೆಗಳು', 'ನೀಲಿ ಗುಲಾಬಿ ಮತ್ತು ಇತರ ಕಥೆಗಳು', 'ಭೂಗತ ಮತ್ತು ಇತರ ಕಥೆಗಳು', 'ವಿಶ್ವ ಸುಂದರಿ ಮತ್ತು ಇತರ ಕಥೆಗಳು' ಹಾಗೂ 'ಪ್ರೀತಿ ಎಂಬ ಮಾಯೆ ಮತ್ತು ಇತರ ಕಥೆಗಳು' ಪ್ರಕಟಿತ ಕಥಾಸಂಕಲನಗಳು. 'ಮೂರನೆಯ ಧ್ವನಿ' (ಸಾಹಿತ್ಯ ಚಿಂತನ), 'ನಿನ್ನೆ ನಾಳೆಗಳ ನಡುವೆ' (ಸಾಮಾಜಿಕ ಚಿಂತನ), 'ನಮ್ಮೊಳಗಿನ ಆಕಾಶ' ಕೆಲವು ವೈಚಾರಿಕ ಕೃತಿಗಳು. 'ಝೇಂಕಾರದ ಹಕ್ಕಿ' ಹಾಗೂ ಇಂಗ್ಲಿಷ್ ಗೀತೆಗಳ ಅನುವಾದದ 'ನನ್ನ ಪ್ರೇಮದ ಹುಡುಗಿ' ಕವನಸಂಕಲಗಳು, 'ಕೆಂಪುಕಾಗೆ', 'ಸತ್ಯಕ್ಕೆ ಜಯ', 'ಕುರುಡರು', 'ನಗರ ಪರ್ವ' ಸೇರಿದಂತೆ ಹಲವು ನಾಟಕಗಳನ್ನು ಗಟ್ಟಿ ರಚಿಸಿದ್ದಾರೆ. ಭಾಷಾಶಾಸ್ತ್ರ, ಪ್ರವಾಸ ಸೇರಿದಂತೆ ವಿವಿಧ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸುವ ಮೂಲಕ ಓದುಗವರ್ಗವನ್ನು ಬೆಳೆಸಿದ್ದಾರೆ.